ಉದಾಹರಣೆಗಳ ಮೂಲಕ ತಿಳಿಸುತ್ತಾರೆ (ನೋಡಿ. **ಶ್ರೀರಾಮಕೃಷ್ಣ ಉಪದೇಶಾಮೃತ,** ಪು.೧೩೩). ಸಾಧಕನು ದೀರ್ಘಕಾಲ ಸಾಧನೆ ಮಾಡಬೇಕಾಗಿರುವುದರಿಂದ ಅದಕ್ಕೆ ಅದಮ್ಯ ಉತ್ಸಾಹ ಮತ್ತು ತಾಳ್ಮೆ ಬೇಕೇಬೇಕು.

### ಶರಣಾಗತಿ

ಜೀವನದ ಪ್ರತಿಯೊಂದು ಕಾರ್ಯವೂ ಪರಮಾತ್ಮನ ಇಚ್ಛೆಯಂತೆ ನಡೆಯುತ್ತಿದೆ ಎಂಬ ಜ್ಞಾನ ಯಾರಲ್ಲಿ ನೆಲೆಸಿದೆಯೋ, ಅದೇ ನಿಜವಾದ ಜ್ಞಾನ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಅಂಥವನ ಮಾನಸಿಕ ಭಾವವೇ ಶರಣಾಗತಿ. ನಿಜವಾದ ಶರಣಾಗತಿಯು ಜ್ಞಾನ ಉಂಟಾಗುವವರೆಗೂ ಸಾಧ್ಯವಿಲ್ಲ. ಆದ್ದರಿಂದ, ಮನಸ್ಸಿನಲ್ಲಿ "ನಾನು ಅವನ ಸೇವಕ, ದಾಸ" ಎಂಬ ಭಾವನೆಯಿಂದ ತನ್ನ ಪಾಲಿನ ಕರ್ತವ್ಯಗಳನ್ನು ಮಾಡುವುದು, ಜೀವನದ ಎಲ್ಲ ಸುಖ–ದುಃಖಗಳೂ 'ಅವನಿಚ್ಛೆ' ಎಂದುಕೊಂಡು, ಮನಸ್ಸಿನಲ್ಲಿ ಅಳುಕದೆ, ಎಲ್ಲವನ್ನೂ ಸಹಜವಾಗಿ ಸ್ವೀಕರಿಸುವುದೇ 'ಶರಣಾಗತಿ' ಎನಿಸಿಕೊಳ್ಳುತ್ತದೆ. ಪುರುಷಪ್ರಯತ್ನ ಮತ್ತು ಶರಣಾಗತಿಗಳಲ್ಲಿ ಪರಸ್ಪರ ವಿರೋಧವೇನಿಲ್ಲ. ಒಂದು ಪತಿಯಾದರೆ, ಇನ್ನೊಂದು ಪತ್ನಿ. ಇವುಗಳ ಸಂಗಮದಿಂದಲೇ ಕೃಪೆಯೆಂಬ ಶಿಶುವು ಜನ್ಮತಾಳುತ್ತದೆ; ಜೀವಿಯನ್ನು ಸಾರ್ಥಕತೆಯ ತುತ್ತತುದಿಗೊಯ್ಯುತ್ತದೆ. ಶ್ರೀರಾಮಕೃಷ್ಣರು ಎಂಜಲೆಲೆಯ ಸಾದೃಶ್ಯವನ್ನು, ಬೆಕ್ಕಿನ ಮರಿಯ ಸಾದೃಶ್ಯವನ್ನು ನೀಡುತ್ತ ಸಾಧಕ ಅದರಂತೆ ಇರಬೇಕೆಂದು ತಿಳಿಸುತ್ತಾರೆ. ಯಾವಾಗ ಮನಸ್ಸು ಭಗವಂತನಲ್ಲಿ ಸಂಪೂರ್ಣ ಶರಣಾಗುತ್ತದೋ ಆಗ ಅದು ಶಾಂತವಾಗುತ್ತದೆ. ಅದನ್ನೇ ಗೀತೆಯಲ್ಲಿಯೂ ಹೇಳಲಾಗಿದೆ: **ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ । ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥ –** "ನಾವು ಮಾಡುವ ಎಲ್ಲ ಬಗೆಯ ಧರ್ಮಗಳಲ್ಲಿಯೂ ಕರ್ತೃತ್ವಬುದ್ಧಿಯನ್ನು ಬಿಟ್ಟು ನನ್ನನ್ನೇ (ಭಗವಂತನನ್ನೇ) ಶರಣು ಹೊಂದು. ನಾನು ನಿನ್ನನ್ನು ಎಲ್ಲ ಪಾಪಗಳಿಂದಲೂ ಮುಕ್ತಗೊಳಿಸುತ್ತೇನೆ, ಶೋಕಿಸದಿರು" (**ಭಗವದ್ಗೀತೆ,** ೧೮.೬೬).

ಒಟ್ಟಿನಲ್ಲಿ, ಸಾಧಕನಿಗೆ ಈ ಮಾರ್ಗದಲ್ಲಿ ಪ್ರಾಮಾಣಿಕತೆ ಬಹಳ ಮುಖ್ಯ. ಶ್ರೀರಾಮಕೃಷ್ಣರು ಹೇಳುತ್ತಾರೆ, ಪುರಿಗೆ ಹೋಗುವ ಮಾರ್ಗ ಗೊತ್ತಿಲ್ಲದೆ ಒಬ್ಬ ಹೊರಟಿದ್ದಾನೆ ಎಂದುಕೊಳ್ಳಿ. ಅವನಿಗೆ ನಿಜವಾಗಿಯೂ ಅಲ್ಲಿಗೆ ಹೋಗಬೇಕೆಂಬ ವ್ಯಾಕುಲತೆ ಇದ್ದು ಅವನು ಪ್ರಾಮಾಣಿಕನಾಗಿದ್ದರೆ, ಮಾರ್ಗದಲ್ಲಿ ಯಾರಾದರೂ ಒಬ್ಬರು ಅವನಿಗೆ ಎದುರಿಗೆ ಸಿಕ್ಕು, 'ದಾರಿ ಹೀಗಲ್ಲ ಹಾಗೆ' ಎಂದು ಸರಿಯಾದ ಮಾರ್ಗದರ್ಶನ ನೀಡುವರು. ಅದನ್ನೇ 'ಆರ್ಜವ' ಅಥವಾ 'ಸರಳತನ' ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಶ್ರೀರಾಮಕೃಷ್ಣರು ಹೇಳುವಂತೆ, **'ಮನ್ ಮುಖ್ ಏಕ್ ಕೊರಾ'** ಅಂದರೆ, ಮನಸ್ಸು, ಮಾತು ಮತ್ತು ಕೃತಿಯಲ್ಲಿ ಒಂದೇ ರೀತಿಯ ವ್ಯವಹಾರ ಇದ್ದರೆ ಬೇರೆಲ್ಲ ಸಹಾಯಗಳೂ ಅಂತಹ ಸಾಧಕನಿಗೆ ಸಹಜವಾಗಿಯೇ ಹರಿದುಬರುತ್ತವೆ. ▸

## ಪ್ರಾರ್ಥನೆಯ ಫಲ

**ಮನಸ್ಸೂ ಮಾತೂ ಒಂದೇ ಆಗಿ ಹೃದಯಶುದ್ಧಿಯಿಂದ ಮಾಡುವ ಪ್ರಾರ್ಥನೆ ಖಂಡಿತವಾಗಿಯೂ ಫಲಕಾರಿಯಾಗುತ್ತದೆ. ಬಾಯಲ್ಲಿ ಮಾತ್ರ "ಸಕಲವೂ ನಿನ್ನದು" ಎಂದು, ಹಾಗೆನ್ನುತ್ತಿರುವಾಗಲೇ ಮನಸ್ಸಿನಲ್ಲಿ, "ಇದೆಲ್ಲಾ ನನ್ನದು" ಎಂದು ಎಣಿಸಿ ಪ್ರಾರ್ಥಿಸಿದರೆ ಅದರಿಂದ ಏನೂ ಪ್ರಯೋಜನವಿಲ್ಲ. ಪ್ರಾರ್ಥನೆ ಮಾಡುವಾಗ ನಿನ್ನನ್ನು ನೀನೇ ಮೋಸಗೊಳಿಸಿಕೊಳ್ಳಬೇಡ. ಭಗವಂತನ ಮುಂದೆ ಸುಳ್ಳಾಡಬೇಡ. ಮನಸ್ಸೂ, ನಾವು ಮಾಡುವ ಕೆಲಸವೂ ಪರಸ್ಪರ ಹೊಂದಿಕೊಂಡಿರಬೇಕು. ಶುದ್ಧಮನಸ್ಸಿನಿಂದಲೂ ಸದ್ಭಾವನೆಯಿಂದಲೂ ಪ್ರಾರ್ಥಿಸು. ಭಗವಂತ ನಿರಾಕರಿಸುವುದಿಲ್ಲ. ನಿನ್ನ ಮೇಲೆ ಆತನಿಗೆ ಎಲ್ಲೆಯಿಲ್ಲದ ಪ್ರೇಮ. ಕಾಲ ಕಾಲದಲ್ಲಿ ಮಾಡಬೇಕಾದುದನ್ನು ಮಾಡಿ, ಭಾರವನ್ನು ಅವನ ಮೇಲೆ ಬಿಡು. ಯಾವುದಕ್ಕೂ ಕಳವಳ ಪಡಬೇಡ.**

**ಸಮುದ್ರದಲ್ಲಿ ಪ್ರಯಾಣಮಾಡುವಾಗ ದಿಕ್ಕನ್ನು ತೋರುವ ಉತ್ತರಮುಖಿಯನ್ನು ಸರಿಯಾಗಿ ಇಟ್ಟುಕೊಂಡಿರುವ ತನಕ ಹಡಗಿಗೆ ಅಪಾಯವಿಲ್ಲ. ಸೂಜಿಗಲ್ಲಿನ ಮುಳ್ಳು ಯಾವಾಗಲೂ ಉತ್ತರದ ಕಡೆಗೇ ತಿರುಗಿರುತ್ತದೆ. ಅದೇ ರೀತಿ, ಮನಸ್ಸು ಎಡೆಬಿಡದೆ ದೇವರೆಡೆಗೇ ತಿರುಗಿ ನೆಲೆಸಿದ್ದರೆ ಜೀವನದ ಹಡಗು ಯಾನವನ್ನು ಮುಟ್ಟುವುದು, ಭಯವಿಲ್ಲ.**

**ಅಹಲ್ಯೆಯು ರಾಮಚಂದ್ರನಿಗೆ ಹೀಗೆ ಹೇಳಿದಳು: "ಹೇ ರಾಮ! ಹಂದಿಯಾಗಿ ಹುಟ್ಟಿದರೂ ನಾನು ಅದನ್ನು ಲೆಕ್ಕಿಸುವುದಿಲ್ಲ. ಆದರೆ ಅನವರತವೂ ನಿನ್ನನ್ನು ಧ್ಯಾನಿಸುವುದನ್ನು ಮಾತ್ರ ತಪ್ಪಿಸಬೇಡ. ಮತ್ತಾವ ವರವೂ ನನಗೆ ನಿನ್ನಿಂದ ಬೇಡ."**



**ದೇವರು ನಿಶ್ಚಯವಾಗಿಯೂ ನಿನ್ನನ್ನು ಗಮನಿಸುವನು. ಮಗೂ, ಅವನ ಹಾಗೆ ನಿನ್ನನ್ನು ಆದರಿಸುವವರು ಯಾರೂ ಇಲ್ಲ. ನೀನು ಅವನಲ್ಲಿ ಬೇಡಿಕೊಂಡಿದ್ದನ್ನೆಲ್ಲಾ ಅವನು ಆಲಿಸುವನು. ನಿನಗೆ ಒಳ್ಳೆಯದು ಯಾವುದೆಂದು ಅವನಿಗೆ ಗೊತ್ತು. ಒಂದು ದಿವಸ ನಿನಗೆ ಖಂಡಿತವಾಗಿಯೂ ಆತನ ದರ್ಶನವು ಸಿಗುವುದು. ಸಾಯುವಾಗಲಾದರೂ ಅದು ಸಿಗುತ್ತದೆ. ಪ್ರಾರ್ಥನೆ ಮಾಡುವುದನ್ನು ಬಿಡಬೇಡ. ಕಷ್ಟದಲ್ಲಾದರೂ ಸುಖದಲ್ಲಾದರೂ ಭಗವಂತನಂತಹ ಸ್ನೇಹಿತರು ಯಾರೂ ಇಲ್ಲ. ಪ್ರಾರ್ಥನೆಯೇ ಜೀವಿಗಳು ದೇವರೊಂದಿಗೆ ಮಾಡುವ ಸಂಭಾಷಣೆ.**

– ಶ್ರೀರಾಮಕೃಷ್ಣ (ಶ್ರೀರಾಮಕೃಷ್ಣ ಉಪನಿಷತ್, ಪು.೮೪,೮೫)

# ಶ್ರೀರಾಮಕೃಷ್ಣರ ವ್ಯಾಕುಲತೆಯ ಸಂದೇಶ

ಸ್ವಾಮಿ ಶಿವಕಾಂತಾನಂದ

ಶ್ರೀರಾಮಕೃಷ್ಣರು ನಿಷ್ಠಾವಂತ ಆಧ್ಯಾತ್ಮಿಕ ಸಾಧಕರಿಗೆ ಉಪದೇಶಿಸಿದ ಮಾರ್ಗವೆಂದರೆ 'ವ್ಯಾಕುಲತೆ'. ಅವರ ಜೀವನ ಮತ್ತು ಸಂದೇಶಗಳಲ್ಲಿ ನಿರಂತರ ಧಾರೆಯಂತೆ ಕಾಣಬರುವ ಈ ಪ್ರಮುಖ ಅಂಶದ ಮನೋಜ್ಞ ವಿವರಣೆಯನ್ನು ನೀಡಿರುವ ಸ್ವಾಮೀಜಿಯವರು ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮದಲ್ಲಿ ಸೇವೆಸಲ್ಲಿಸುತ್ತಿದ್ದಾರೆ. ಇವರು ಒಳ್ಳೆಯ ವಾಗ್ಮಿಗಳು ಮತ್ತು ಬರಹಗಾರರು.

ಜಗತ್ತಿನಲ್ಲಿ ಎಲ್ಲರೂ ಒಂದು ರೀತಿಯ ಹುಚ್ಚರೇ. ಪ್ರಾಪಂಚಿಕ ವಸ್ತುಗಳಿಗಾಗಿ ಎಲ್ಲರೂ ಹುಚ್ಚರಾಗಿಬಿಟ್ಟಿದ್ದಾರೆ. ಪ್ರಾಪಂಚಿಕ ವಸ್ತುಗಳನ್ನು ಹೊಂದಲು, ಪ್ರಾಪಂಚಿಕ ಸುಖವನ್ನು ಅನುಭವಿಸಲು ಎಲ್ಲರೂ ಕಾತರರಾಗಿರುತ್ತಾರೆ, ವ್ಯಾಕುಲರಾಗಿರುತ್ತಾರೆ. ಕೃಪಣರು ಹಣಕ್ಕಾಗಿ ಪರಿತಪಿಸುತ್ತಾರೆ, ಕಾಮುಕರು ಕಾಮಿನಿಗಾಗಿ ಪರಿತಪಿಸುತ್ತಾರೆ. ಬೇರೆ ಎಲ್ಲ ಸಂಗತಿಗಳೂ ಅವರಿಗೆ ಬೇಸರಿಕೆ ತರಿಸುತ್ತವೆ. ಕೇವಲ ಅದಕ್ಕಾಗಿ ಚಡಪಡಿಸುತ್ತಾರೆ. ಬೇರೆ ಯಾವುದನ್ನು ಕೇಳಿದರೂ, ಯಾವುದನ್ನು ನೋಡಿದರೂ, ಯಾವುದನ್ನು ಸವಿದರೂ ಅದರಲ್ಲಿ ಅವರಿಗೆ ಮನಸ್ಸಿಲ್ಲ, ಆನಂದವು ಸಿಗುವುದಿಲ್ಲ. ಇಂತಹ ತೀವ್ರತೆಯನ್ನು ನಾವು ಭಗವಂತನೆಂಬ ಪರವಸ್ತುವಿನೆಡೆಗೆ ತಿರುಗಿಸಿಬಿಟ್ಟರೆ, ಅವನನ್ನು ಹಂಬಲಿಸಿದರೆ ಅದೇ ಒಂದು ವಿಶಿಷ್ಟ ರೀತಿಯ ಸಾಧನೆಯಾಗುತ್ತದೆ. ಇದನ್ನೇ 'ವ್ಯಾಕುಲತೆ' ಎನ್ನುವುದು.

ವ್ಯಾಕುಲತೆ ಎಂಬುದು ಮನುಷ್ಯನ ಸಹಜವಾದ ಸ್ವಭಾವ. ನಮ್ಮ ಈ ಸ್ವಭಾವ ಪ್ರಾಪಂಚಿಕ ವಸ್ತುಗಳಿಗಾಗಿ ಸದಾ ಹೊರಮುಖವಾಗಿಬಿಟ್ಟಿರುತ್ತದೆ. ನಾವು ಬಯಸುವ ಜಗತ್ತಿನ ವಿವಿಧ ಪದಾರ್ಥಗಳ ಮೇಲೆ, ಇಚ್ಛಿಸುವ ವ್ಯಕ್ತಿಗಳ ಮೇಲೆ ಅದು ನೆಟ್ಟಿದೆ. ವಿಷಯಸುಖದಲ್ಲಿರುವ ಮಧುರತೆಗೆ ಮನಸ್ಸು ಮಾರುಹೋಗುತ್ತದೆ. ಆದರೆ ಭಗವಂತನಿಗಿಂತ ಮಧುರವಾದ ವಸ್ತು ಮತ್ತೊಂದಿಲ್ಲ, ಅಂತಹ ಶ್ರೇಷ್ಠವಾದ ವಸ್ತು ಜಗತ್ತಿನಲ್ಲಿ ಬೇರೊಂದಿಲ್ಲ ಎಂಬ ವಿವೇಕ ಯಾವಾಗ ಮನಸ್ಸಿನಲ್ಲಿ ಉಂಟಾಗುತ್ತದೋ, ಆಗ ನಾವು ನಿಜವಾದ ಆಧ್ಯಾತ್ಮಿಕ ಪಿಪಾಸುಗಳಾಗುತ್ತೇವೆ.



ಶ್ರೀರಾಮಕೃಷ್ಣರು ತಮ್ಮ ಸಾಧನೆಯ ಜೀವನದುದ್ದಕ್ಕೂ ತೀವ್ರವಾದ ವ್ಯಾಕುಲತೆಯನ್ನು ಪ್ರದರ್ಶಿಸಿ, ಶೀಘ್ರಗತಿಯಲ್ಲಿ ವಿವಿಧ ಭಗವತ್‌ರೂಪಗಳ ಸಾಕ್ಷಾತ್ಕಾರವನ್ನು ಪಡೆದುಕೊಂಡರು. ಆ ಮೂಲಕ, ವ್ಯಾಕುಲತೆಯಿಂದ ಭಗವಂತನನ್ನು ಪಡೆಯುವುದು ಹೇಗೆ ಎಂಬುದನ್ನು ಸಾಧಿಸಿ ತೋರಿಸಿದರು. ಹಾಗೂ ತಮ್ಮ ವಚನಾಮೃತದಲ್ಲಿ ಮತ್ತೆ ಮತ್ತೆ ಇದನ್ನೇ ಉಪದೇಶಿಸಿದರು. ಶ್ರೀರಾಮಕೃಷ್ಣರೇ ಹೇಳುವಂತೆ, "ಈ ಕಲಿಯುಗದಲ್ಲಿ ಮೂರು ದಿನ, ಮೂರು ರಾತ್ರಿ ಕಂಬನಿ ಸುರಿಸಿ ತೀವ್ರ ವ್ಯಾಕುಲತೆಯಿಂದ ಪ್ರಾರ್ಥಿಸಿದರೆ ಆತನನ್ನು ಪಡೆಯಬಹುದು." ಆದರೆ ನಾವೆಲ್ಲರೂ ಪ್ರಾಪಂಚಿಕ ವಸ್ತುಗಳಿಗಾಗಿ ಇಡೀ ಜೀವಮಾನಪೂರ್ತಿ ಕಣ್ಣೀರ ಕೋಡಿ ಹರಿಸುತ್ತೇವೆ. ಶ್ರೀರಾಮಕೃಷ್ಣರು ಹೇಳುತ್ತಾರೆ, "ಕೆಲವರು ತಮಗೆ ಮಕ್ಕಳಾಗಲಿಲ್ಲವೆಂದು ಕಣ್ಣೀರ ಕೋಡಿಯನ್ನು ಸುರಿಸುವರು, ಮತ್ತೆ ಕೆಲವರು ತಮಗೆ ಐಶ್ವರ್ಯ ಪ್ರಾಪ್ತಿಯಾಗಲಿಲ್ಲವೆಂದು ಕೊರಗಿ ಸಾಯುವರು. ಅಯ್ಯೋ, ದೇವರನ್ನು ನಾನು ಕಂಡಿಲ್ಲವೆಂದು ಎಷ್ಟು ಜನ ತಾನೇ ವ್ಯಥೆ ಪಡುವರು!"

ತಮ್ಮ ಇಷ್ಟದೇವತೆಯ ದರ್ಶನ ಪಡೆದ ಮೇಲೂ ಮಹಾಭಕ್ತರು ಪ್ರಾರ್ಥಿಸುವುದು ಅವಿರತವಾದ ಈ ವ್ಯಾಕುಲತೆಗಾಗಿಯೇ. ನರಸಿಂಹನು ಹಿರಣ್ಯಕಶಿಪುವನ್ನು ಸಂಹರಿಸಿ ಶಾಂತನಾದ ಮೇಲೆ, ಪ್ರಹ್ಲಾದನನ್ನು ಯಾವುದಾದರೂ ವರವನ್ನು ಕೇಳಿಕೊಳ್ಳಲು ಅಪ್ಪಣೆ ಮಾಡಿದಾಗ, ಅವನು ಪ್ರಾರ್ಥಿಸಿದ್ದಿಷ್ಟೆ: **ಯಾ ಪ್ರೀತಿರವಿವೇಕಿನಾಂ ವಿಷಯೇಷ್ವನಪಾಯಿನೀ । ತ್ವಾಮನುಸ್ಮರತಃ ಸಾ ಮೇ ಹೃದಯಾನ್ ಮಾಪಸರ್ಪತು ॥** – "ಹೇಗೆ ಅವಿವೇಕಿಗಳಿಗೆ ಯಾವಾಗಲೂ ವಿಷಯವಸ್ತುಗಳಲ್ಲಿ ತೀವ್ರವಾದ ಪ್ರೀತಿಯಿರುವುದೊ ಅಂತಹ ಪ್ರೀತಿಯು ನಿನ್ನ ಸ್ಮರಣೆ ಮಾಡುವುದರಲ್ಲಿಯೇ ನನಗಿರಲಿ. ನಿನ್ನ ಅನುಸ್ಮರಣೆಯು ನನ್ನ ಹೃದಯದಿಂದ ದೂರವಾಗದಿರಲಿ." ಅದನ್ನೇ

ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: "ಪತಿವ್ರತೆಗೆ ತನ್ನ ಪ್ರಿಯತಮನ ಮೇಲಿನ ವಿಶ್ವಾಸ, ಜಿಪುಣನಿಗೆ ಹಣದ ಮೇಲಿನ ಆಸಕ್ತಿ – ಇಂತಹ ಆಸಕ್ತಿಗಳು ಹತ್ತರಷ್ಟು ಮಟ್ಟಿಗೆ ಸೇರಿ, ದೇವರ ಮೇಲಿನ ಪ್ರೇಮವಾದರೆ ನೀನು ಅವನನ್ನು ಪಡೆಯುವೆ" ಎಂದು.

ಈ ವ್ಯಾಕುಲತೆಯ ತೀವ್ರತೆ ಎಷ್ಟರಮಟ್ಟಿಗಿರಬೇಕೆಂದರೆ, 'ನೀರಿನಲ್ಲಿ ಮುಳುಗಿರುವವನು ಉಸಿರಾಟಕ್ಕೆ ಚಡಪಡಿಸುವಂತೆ, ಭಗವಂತನಿಗಾಗಿ ಚಡಪಡಿಸಬೇಕು'. ಒಮ್ಮೆ ಗುರು ಮತ್ತು ಶಿಷ್ಯ ಒಂದು ಕೆರೆಯ ದಡದ ಮೇಲೆ ನಡೆದು ಹೋಗುತ್ತಿದ್ದರು. ಅದೇ ಸಮಯದಲ್ಲಿ ಶಿಷ್ಯನು ಗುರುವನ್ನು, "ಗುರುಗಳೇ, ದೇವರನ್ನು ಹೇಗೆ ಪಡೆಯಬಹುದು?" ಎಂದು ಪ್ರಶ್ನಿಸಿದನು. ತಕ್ಷಣವೇ ಗುರುವು ಆತನನ್ನು ನೀರಿನಲ್ಲಿ ಮುಳುಗಿಸಿ ತಲೆಯನ್ನು ಕೆಲವು ನಿಮಿಷ ಅದುಮಿ ಹಿಡಿದನು, ನಂತರ ಮೇಲೆತ್ತಿ, "ಹೇಗಿತ್ತು?" ಎಂದು ಕೇಳಿದನು. ಆಗ ಶಿಷ್ಯನು, "ನನ್ನ ಕೊನೆಗಾಲ ಬಂದಂತಿತ್ತು, ಅವಸ್ಥೆ ತುಂಬಾ ದಾರುಣವಾಗಿತ್ತು" ಎಂದನು. ಆಗ ಗುರುವು "ನೀನು ಕ್ಷಣಕಾಲ ಉಸಿರಾಡುವುದಕ್ಕೆ ಹೇಗೆ ಹಂಬಲಿಸುತ್ತಿದ್ದೆಯೋ, ಅದರಂತೆ ದೇವರಿಗಾಗಿ ಹಂಬಲಿಸಿದರೆ ದೇವರನ್ನು ಕಾಣುವೆ" ಎಂದನು. "ವ್ಯಾಕುಲತೆಯೆಂದರೆ ಹೀಗಿರಬೇಕು" ಎನ್ನುತ್ತಾರೆ ಶ್ರೀರಾಮಕೃಷ್ಣರು.

ಕೊಲ್ಕತಾದ ಭಕ್ತರ ಮನೆಗಳಲ್ಲಿ, ಕೀರ್ತನೆಯ ವೇಳೆಯಲ್ಲಿ ಶ್ರೀರಾಮಕೃಷ್ಣರು ದಿವ್ಯೋನ್ಮತ್ತರಾಗಿ ನರ್ತಿಸುತ್ತಿದ್ದಾಗ, ಅನೇಕರು ನೆಲದ ಮೇಲೆ ಹೊರಳಾಡುತ್ತಿದ್ದರು, ಮೂರ್ಛೆ ಹೋಗುತ್ತಿದ್ದರು. ಇದನ್ನು ಕಂಡು ನರೇಂದ್ರನು ತನ್ನ ಗುರುಭಾಯಿಗಳಿಗೆ ಇಂತಹ ಭಾವೋದ್ವೇಗದ ದುಷ್ಪರಿಣಾಮಗಳ ಬಗ್ಗೆ ಹೀಗೆ ಎಚ್ಚರಿಸುತ್ತಿದ್ದನು. "ಇಂತಹ ಅಪಕ್ವ ಭಾವೋದ್ವೇಗಗಳು ನಮ್ಮಲ್ಲಿ ಶಾಶ್ವತವಾದ ಮಾರ್ಪಾಡನ್ನು ತರುವುದಿಲ್ಲ. ಕೆಲವು ಕ್ಷಣಗಳೇನೋ ಅವು ಭಗವದ್ದರ್ಶನಕ್ಕಾಗಿ ವ್ಯಾಕುಲತೆಯನ್ನು ನೀಡುತ್ತವೆ, ಆದರೆ ಕಾಮಿನಿ–ಕಾಂಚನಗಳ ಆಸೆಯನ್ನೇನೂ ಅಳಿಸಿಹಾಕುವುದಿಲ್ಲ. ಇಂತಹ ಆವೇಶದ ಆಳವೂ ಕಡಿಮೆ, ಪರಿಣಾಮವೂ ಅಲ್ಪ. ಇಂತಹ ಭಾವೋದ್ವೇಗದಿಂದ ಧಾರಾಕಾರವಾದ ಕಣ್ಣೀರು, ರೋಮಾಂಚನ ಮುಂತಾದ ದೈಹಿಕ ಬದಲಾವಣೆ, ಬಾಹ್ಯಪ್ರಜ್ಞಾಶೂನ್ಯತೆ – ಮುಂತಾದವುಗಳೆಲ್ಲ ಉಂಟಾಗಬಹುದು. ಆದರೆ ನಾನು ದೃಢವಾಗಿ ನಂಬಿದ್ದೇನೆ, ಇವೆಲ್ಲ ನರಮಂಡಲಗಳ ದೌರ್ಬಲ್ಯ. ಇಂತಹವರು ಹೆಚ್ಚಿನ ಪೌಷ್ಟಿಕ ಆಹಾರವನ್ನು ತೆಗೆದುಕೊಳ್ಳಬೇಕು ಮತ್ತು ವೈದ್ಯರ ಬಳಿ ಹೋಗಿ ಒಳ್ಳೆಯ ಔಷಧಗಳನ್ನು ತೆಗೆದುಕೊಳ್ಳಬೇಕು. ಇವೆಲ್ಲ ನಿಜವಾದ ವ್ಯಾಕುಲತೆಯ ಲಕ್ಷಣಗಳಲ್ಲ."

ನಾರದ ಭಕ್ತಿ ಸೂತ್ರದಲ್ಲಿ **'ತತ್ತು ವಿಷಯತ್ಯಾಗಾತ್ ಸಂಗತ್ಯಾಗಾಚ್ಚ '** (ನಾರದೀಯ ಭಕ್ತಿಸೂತ್ರಗಳು. ಸೂತ್ರ, ೩೫) ಎಂದು ಹೇಳಿದೆ. ಭಗವದ್ಭಕ್ತಿಯು ಕೇವಲ ಪ್ರೇಮಸ್ವರೂಪವೇ ಆದಲ್ಲಿ ವಿಷಯವಸ್ತುಗಳ ಮೇಲಿನ ಪ್ರೇಮವೇ ಏಕೆ ಸಹಾಯ ಮಾಡಲಾರದೆಂಬ ಕುತರ್ಕಕ್ಕೆ ನಾರದರು ಇಲ್ಲಿ ಸರಿಯಾಗಿ ಉತ್ತರಿಸಿದ್ದಾರೆ. ವಿಷಯವಸ್ತುಗಳು ನಮ್ಮನ್ನು ಭಗವಂತನಿಂದ ವಿಮುಖರನ್ನಾಗಿ ಮಾಡಿಬಿಡುತ್ತವೆ, ಬಂಧನವನ್ನು ಹೆಚ್ಚಿಸುತ್ತವೆ. ಆದ್ದರಿಂದ ವಿಷಯಾಸಕ್ತಿಯನ್ನು ಪಕ್ಕಕ್ಕೆ ಸರಿಸದೆ ವ್ಯಾಕುಲತೆಯನ್ನು ಬೆಳೆಸಿಕೊಳ್ಳುವುದು ಅಸಾಧ್ಯ. ಆದ್ದರಿಂದಲೇ ಶ್ರೀರಾಮಕೃಷ್ಣರು ಹೇಳುತ್ತಾರೆ, "ಸ್ವಲ್ಪ ಕಾಮನೆಯಿದ್ದರೂ ಭಗವಂತನನ್ನು ಪಡೆಯಲು ಸಾಧ್ಯವಿಲ್ಲ. ದಾರದಲ್ಲಿ ಒಂದು ಸಣ್ಣ ಅಡ್ಡೆಳೆಯಿದ್ದರೂ ಅದು ಸೂಜಿಯೊಳಗೆ ತೂರುವುದಿಲ್ಲ. ಮನಸ್ಸು ಯಾವಾಗ ಶುದ್ಧವಾಗುವುದೋ, ಆಗ ಸಚ್ಚಿದಾನಂದದ ಲಾಭವಾಗುತ್ತದೆ." ಅನನ್ಯತೆಗೆ ವಿರುದ್ಧವಾಗಿರುವ ವಿಷಯಗಳ ಬಗೆಗೆ ಉದಾಸೀನವಾಗಿರುವುದು ಎಂದರೆ, ಮನಸ್ಸಿನ ಭಕ್ತಿಗೆ ಅನುಕೂಲವಾಗಿರುವ ವಿಷಯಗಳ ಕಡೆಗೆ ಗಮನ ಹರಿಸುವುದು ಎಂದರ್ಥ. ಇದೇ ವ್ಯಾಕುಲತೆಯ ಹಾದಿಯಲ್ಲಿ ಮೊದಲು ಮಾಡಬೇಕಾದ ಸಾಧನೆ. ಹೀಗಾಗಿ ಸಾಧಕನು ಪ್ರಲೋಭನೆಗಳಿಂದ ದೂರವಿರಬೇಕಾಗುತ್ತದೆ. ಶ್ರೀರಾಮಕೃಷ್ಣರು ಹೇಳುತ್ತಿದ್ದರು, "ನಿರ್ಜನ ಪ್ರದೇಶದಲ್ಲಿ ಆತನನ್ನು ಕರೆ, ಪ್ರಾರ್ಥನೆ ಮಾಡು. ದರ್ಶನ ನೀಡೆಂದು ವ್ಯಾಕುಲನಾಗಿ ಅಳು." ಆದರೆ ಎಲ್ಲರಿಗೂ ನಿರ್ಜನ ಪ್ರದೇಶವನ್ನು ಹೊಂದುವ ಅವಕಾಶ ಸಿಗುವುದಿಲ್ಲ. ಸಂಸಾರ, ಕೆಲಸಕಾರ್ಯಗಳಂತೂ ಸದಾ ಮೈತುಂಬಾ ಇರುತ್ತವೆ. ಹಾಗೆಂದು ಎಲ್ಲವೂ ಮುಗಿದುಹೋದ ನಂತರ ಭಗವಂತನಿಗೆ ವ್ಯಾಕುಲನಾಗಬೇಕೆಂದಲ್ಲ. ಅದಕ್ಕಾಗಿ ಅವರು ಹೇಳುತ್ತಿದ್ದರು, " 'ಈ ಕೆಲಸದ ಮೂಲಕ ಪಡೆಯಲು ಆಗುವುದಿಲ್ಲ, ಆ ಕೆಲಸದ ಮೂಲಕ ಪಡೆಯಲಾಗುವುದಿಲ್ಲ' ಎಂದೇನೂ ಇಲ್ಲ. ಎಲ್ಲವೂ ಆತನ ಕೃಪೆಯ ಮೇಲೆ ನಿಂತಿದೆ. ಆದರೂ ವ್ಯಾಕುಲನಾಗಿ ಇದ್ದರೆ ಆತನ ಕೃಪೆಯಾಗುತ್ತದೆ."

ಶ್ರೀರಾಮಕೃಷ್ಣರು ಭಗವತ್‌ವ್ಯಾಕುಲತೆಯನ್ನು ಪಡೆಯಲು, ಪ್ರಾಪಂಚಿಕ ವಾಸನೆಗಳನ್ನು ಮತ್ತು ಪ್ರಲೋಭನೆಗಳನ್ನು ತೊಡೆದು ಹಾಕಲು ಏನೇನು ಮಾಡಿದರು ಎಂದು ನೋಡಲು ಕೆಲವು ಘಟನೆಗಳನ್ನು ಉಲ್ಲೇಖಿಸಬೇಕಾಗುತ್ತದೆ. ಅವರು ಮಣ್ಣು, ಹೊನ್ನು ಎರಡೂ ಒಂದೇ ಎನ್ನುವುದು ಸ್ಪಷ್ಟವಾಗಿ ಅನುಭವವಾಗಲೆಂದು ಒಂದು ಕೈಯ್ಯಲ್ಲಿ ಮಣ್ಣನ್ನೂ, ಮತ್ತೊಂದು ಕೈಯ್ಯಲ್ಲಿ ನಾಣ್ಯಗಳನ್ನೂ ಹಿಡಿದು, "ಮಣ್ಣೇ ಹೊನ್ನು, ಹೊನ್ನೇ ಮಣ್ಣು" ಎಂದು ಎರಡನ್ನೂ ಎಸೆದುಬಿಟ್ಟರು. ಇದರಿಂದ ಅವರ ಕಾಂಚನಾಸಕ್ತಿಯು ಸಂಪೂರ್ಣವಾಗಿ ಹೊರಟುಹೋಯಿತು. **"ಸ್ತ್ರಿಯಃ ಸಮಸ್ತಾ ಸಕಲಾ ಜಗತ್ಸು"** ಎಂಬ ತಂತ್ರಶಾಸ್ತ್ರದ ವಾಕ್ಯದಂತೆ, ಎಲ್ಲ ಸ್ತ್ರೀಯರೂ ಭಗವತಿಯ ಸ್ವರೂಪರೆಂದು ಕಾಣುತ್ತ, ಭೋಗವಾಸನೆಯನ್ನು ಸಂಪೂರ್ಣವಾಗಿ ಕಿತ್ತುಹಾಕಿದರು. ಆತ್ಮನಿಗ್ರಹವಿಲ್ಲದೆ, ಇಂದ್ರಿಯ ಸಂಯಮವಿಲ್ಲದೆ, ಪೂರ್ವಸಂಸ್ಕಾರಗಳಿಗೆ ಬಲಿಯಾದ ಮನಸ್ಸಿನಿಂದ ಭಗವಂತನ ದರ್ಶನಕ್ಕಾಗಿ ಕಾತರಿಸಲಾಗುವುದಿಲ್ಲವೆಂಬುದು ಶ್ರೀರಾಮಕೃಷ್ಣರಿಗೆ ಚೆನ್ನಾಗಿ ತಿಳಿದಿತ್ತು. ಯಾವುದೇ ಭಾವದ ಸಾಧನೆಯನ್ನು ತೆಗೆದುಕೊಂಡರೂ ಅವರು ಅದರಲ್ಲಿ ಅದ್ಭುತವಾದ ತನ್ಮಯತೆಯನ್ನು ಹೊಂದುತ್ತಿದ್ದರು. ಉಳಿದೆಲ್ಲಾ ವಿಷಯಗಳಲ್ಲಿ ಸಂಪೂರ್ಣವಾದ ತಾತ್ಸಾರವನ್ನು ಹೊಂದುತ್ತಿದ್ದರು. ಅಕಸ್ಮಾತ್

ಉಂಟಾದ ಆಯಾ ವಸ್ತುಗಳ ಸಂಪರ್ಕದಿಂದ ಅಸಹನೀಯವಾದ ವೇದನೆಯನ್ನು ಅನುಭವಿಸುತ್ತಿದ್ದರು. ತಕ್ಷಣ ತಮ್ಮ ಶರೀರ ಮತ್ತು ಮನಸ್ಸನ್ನು ಹಿಂತೆಗೆದುಕೊಂಡುಬಿಡುತ್ತಿದ್ದರು. ಒಮ್ಮೆ ಹಿಂತೆಗೆದುಕೊಂಡ ಮೇಲೆ ಜೀವನದಲ್ಲಿ ಮತ್ತೆಂದಿಗೂ ಅದರ ಕಡೆ ಗಮನ ಹರಿಸುತ್ತಿರಲಿಲ್ಲ. ಆದರೆ ಸಾಮಾನ್ಯರಾದ ನಾವು ನಮ್ಮ ಅಂತರಂಗಗಳಲ್ಲಿ ಪ್ರವಹಿಸುವ ಜನ್ಮಜನ್ಮಾಂತರದ ಸಂಸ್ಕಾರಗಳ ಪ್ರವಾಹದಲ್ಲಿ, ಬಾಹ್ಯವಸ್ತುಗಳೊಡನೆ ಮತ್ತು ವ್ಯಕ್ತಿಗಳೊಡನೆ ಆಕರ್ಷಣೆ, ವಿಕರ್ಷಣೆಗಳ ಕೊನೆಯಿರದ ಹೋರಾಟದಲ್ಲಿಯೇ ಮುಳುಗಿರುತ್ತೇವೆ. ಭಗವಂತನ ವಿಷಯವನ್ನುಳಿದು ಉಳಿದೆಲ್ಲ ಬಾಹ್ಯವಸ್ತುಗಳ ಸೆಳೆತವನ್ನೆಲ್ಲ ಹಿಂತೆಗೆದುಕೊಂಡು ಅಂತರಂಗದಲ್ಲಿ ಹೆಚ್ಚು ಹೆಚ್ಚು ಆಳಕ್ಕೆ ಮುಳುಗಿ, ಸೂಕ್ಷ್ಮವಾದ ಆಧ್ಯಾತ್ಮಿಕ ಸತ್ಯವನ್ನು ಅರಿಯಲು ನಾವು ತೀವ್ರಪ್ರಯತ್ನವನ್ನು ಪಡಬೇಕು. ಆಗಮಾತ್ರ ಶ್ರೀರಾಮಕೃಷ್ಣರ ವ್ಯಾಕುಲತೆಯ ಶ್ರೇಷ್ಠತೆ ನಮಗೆ ಸ್ವಲ್ಪವಾದರೂ ಅರಿವಾಗುತ್ತದೆ.

ಶ್ರೀರಾಮಕೃಷ್ಣರ ಜೀವನದಲ್ಲಿ, ವ್ಯಾಕುಲತೆಯು ತೀವ್ರತೆಯನ್ನು ಕಂಡ ಎರಡು ಸನ್ನಿವೇಶಗಳನ್ನು ಉದಾಹರಿಸಬಹುದು. ಮೊದಲನೆಯದಾಗಿ ಅವರು ಜಗನ್ಮಾತೆಯನ್ನು ಸಾಕ್ಷಾತ್ಕರಿಸಿಕೊಂಡಿದ್ದು ಹಾಗೂ ಎರಡನೆಯದಾಗಿ, ಶ್ರೀಕೃಷ್ಣದರ್ಶನಕ್ಕಾಗಿ ವ್ಯಾಕುಲತೆಯನ್ನು ಹೊಂದಿದ್ದು. ಅವರ ಹನ್ನೆರಡು ವರ್ಷಗಳ ದೀರ್ಘ ಸಾಧನೆಯಲ್ಲಿ ಮೊದಲ ನಾಲ್ಕು ವರ್ಷ ಅವರು ಕೇವಲ ವ್ಯಾಕುಲತೆಯನ್ನು ಅವಲಂಬಿಸಿಯೇ ಯಶಸ್ಸನ್ನು ಪಡೆದರು. ಅಣ್ಣ ರಾಮಕುಮಾರನ ಹಠಾತ್ ಮರಣದ ನಂತರ 'ಜೀವನವು ನಶ್ವರ' ಎಂಬುದು ಅವರಿಗೆ ಮತ್ತಷ್ಟು ಸ್ಪಷ್ಟವಾಗಿ ಮನದಟ್ಟಾಯಿತು. ಜಗತ್ತನ್ನೇ ಮರೆತು, ಜಗನ್ಮಾತೆಯನ್ನೇ ಚಿಂತಿಸುತ್ತಾ, ಮಂದಿರದ ಪೂಜೆಯಲ್ಲಿ ನಿರತರಾಗಿರುತ್ತಿದ್ದರು. ಸದಾಕಾಲ ಆಕೆಯ ದರ್ಶನಭಾಗ್ಯಕ್ಕಾಗಿ ವ್ಯಾಕುಲತೆಯನ್ನು, ಚಡಪಡಿಕೆಯನ್ನು ವ್ಯಕ್ತಪಡಿಸುತ್ತಿದ್ದರು. ಊಟ ತಿಂಡಿ ನಿದ್ರೆ ಯಾವುದರಲ್ಲಿಯೂ ಅವರಿಗೆ ಆಸಕ್ತಿ ಇರಲಿಲ್ಲ. ಗೂಡಿನಲ್ಲಿ ಕಾವು ಕೊಡುವ ಹಕ್ಕಿಯ ದೃಷ್ಟಿ ಮೇಲುಗಡೆ ಇದ್ದರೂ, ಮನಸ್ಸೆಲ್ಲಾ ಮೊಟ್ಟೆಯ ಮೇಲಿರುವಂತೆ, ಇತರೆಲ್ಲ ಕಾರ್ಯಗಳಲ್ಲಿ ಅನ್ಯಮನಸ್ಕರಾಗಿ ಜಗನ್ಮಾತೆಯ ದರ್ಶನ ಚಿಂತನೆಯಲ್ಲಿಯೇ ಮಗ್ನರಾಗಿರುತ್ತಿದ್ದರು. ಪೂಜಾಸಮಯದಲ್ಲಿ ವಿಗ್ರಹದ ಮುಂದೆ ಆಸನದ ಮೇಲೆ ಕುಳಿತಾಗ, ಎದೆಯ ಮೇಲೆಲ್ಲಾ ಕಣ್ಣೀರು ಸುರಿದು ತೋಯಿಸುತ್ತಿತ್ತು. ಸಂಜೆಯಾಗುತ್ತಿದ್ದಂತೆ, ಪಶ್ಚಿಮದಲ್ಲಿ ಸೂರ್ಯ ಅಸ್ತಂಗತನಾಗುತ್ತಿದ್ದಂತೆ, ಹೃದಯದ ಬೇಗೆ ಮತ್ತೊಮ್ಮೆ ಕೆರಳುತ್ತಿತ್ತು. ದೇವಾಲಯದಲ್ಲಿ ಆರತಿ, ಗಂಟೆ, ಜಾಗಟೆಗಳ ನಾದ ಕೇಳಿಬಂದಾಗ ಅವರು ಛಾವಣಿಯನ್ನು ಏರಿ, "ಅಯ್ಯೋ, ತಾಯಿಯ ದರ್ಶನವಿಲ್ಲದೇ ಮತ್ತೂ ಒಂದು ದಿವಸ ಕಳೆದು ಹೋಯಿತು. ನಶ್ವರವಾದ ಜೀವನದಲ್ಲಿ ನಿನ್ನನ್ನು ಕಾಣದೆ ಮತ್ತೊಂದು ದಿನವೂ ಹೀಗೆ ವ್ಯರ್ಥವಾಗಿ ಹೋಯಿತಲ್ಲ! ನೀನೇಕೆ ನನ್ನ ಮೇಲೆ ಕೃಪೆ ಮಾಡದಿರುವೆ?" ಎಂದು ಅಳುತ್ತಿದ್ದರು. ಇಂತಹ ತೀವ್ರ ವ್ಯಾಕುಲತೆಯು ಅವರ ಶರೀರದ ಮೇಲೂ ಹಲವು ವಿಧವಾದ ಪರಿಣಾಮವನ್ನುಂಟುಮಾಡಿತು. ಮುಖ ಮತ್ತು ಎದೆಯ ಭಾಗವು ಸದಾ ಕೆಂಪಾಗಿರುತ್ತಿತ್ತು, ಕಣ್ಣುಗಳು ಕೆಂಪಾಗಿ ಅಶ್ರುಭಾರದಿಂದ ಊದಿಕೊಂಡಿರುತ್ತಿತ್ತು. ಏನೋ ಚಡಪಡಿಕೆ, ಕಳವಳ, ಕಾತರತೆ ಅವರ ಶರೀರ ಮತ್ತು ಮನಸ್ಸುಗಳಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತಿದ್ದವು. ಇಂತಹ ತೀವ್ರ ವ್ಯಾಕುಲತೆಯ ಮುಂದೆ ಜಗನ್ಮಾತೆಯು ಕರಗಿಹೋದಳು. ತನ್ನ ದಿವ್ಯಪುತ್ರನಿಗೆ ಜ್ಯೋತಿಸ್ವರೂಪಿಣಿಯಾಗಿ ದರ್ಶನವನ್ನು ನೀಡಿದಳು.

ಇದಾಗಿ ಕೆಲವು ಸಮಯದ ನಂತರ ಶ್ರೀರಾಮಕೃಷ್ಣರು ಶ್ರೀಕೃಷ್ಣದರ್ಶನಕ್ಕಾಗಿ ಮಧುರಭಾವ ಸಾಧನೆಯನ್ನು ಆರಂಭಿಸಿದರು. ಜಗದಂಬೆಯ ಪೂಜಾ ಸೇವಾದಿಗಳನ್ನು ಮಾಡುತ್ತ ತಮ್ಮ ಮೇಲೆ ಸ್ತ್ರೀಭಾವವನ್ನು ಆರೋಪಿಸಿಕೊಂಡಿದ್ದರು. ಆಗ ಅವರು ರಾಧಾಭಾವದಲ್ಲಿದ್ದರು. ಆ ಸಮಯದಲ್ಲಿ ಸ್ತ್ರೀವೇಷ ಭೂಷಣಗಳನ್ನು ಧರಿಸಲೂ ಹಿಂಜರಿಯಲಿಲ್ಲ. ಅವರ ಚಲನವಲನಗಳು, ಹಾವಭಾವಗಳು – ಎಲ್ಲವೂ ಮಾರ್ಪಾಡಾದವು. ಕೃಷ್ಣನ ಮೇಲಿನ ಪ್ರಾರ್ಥನೆ ನಿರಂತರವಾಗಿ ಹಗಲು ರಾತ್ರಿಯೆನ್ನದೆ ಮುಂದುವರೆಯಿತು. ಪಕ್ಷ ಮಾಸಗಳು ಕಳೆದರೂ ನಿರಾಶರಾಗದೆ ವ್ಯಾಕುಲತೆಯಿಂದ ಕಾದುಕೊಂಡಿದ್ದರು. ಕ್ರಮೇಣ ಅವರ ಪ್ರಾರ್ಥನೆ ರೋದನವಾಯಿತು ಮತ್ತು ತೀವ್ರ ವ್ಯಾಕುಲತೆಯಿಂದ ಮನಸ್ಸು ಅಸ್ಥಿರವಾಯಿತು. ಆಹಾರ ನಿದ್ರೆಗಳೆಲ್ಲ ದೂರವಾದುವು. ಅವರ ಹೃದಯದ ವಿರಹವೇದನೆ ಅಂಥದ್ದು! ತನ್ನ ಪ್ರಿಯತಮನೊಡನೆ ಮಿಲನ ಹೊಂದಬೇಕೆಂಬ ಮನಸ್ಸಿಗೆ ಅಡ್ಡಿಯುಂಟಾದಾಗ, ಹೃದಯ ಕಿತ್ತು ತಿನ್ನುವಂತಹ ವಿರಹವೇದನೆಯಾಗುತ್ತದೆ. ಹೃದಯದ ತೀವ್ರ ಸಂಕಟವು ಶ್ರೀರಾಮಕೃಷ್ಣರಲ್ಲಿ ಅನೇಕ ದೈಹಿಕ ಬದಲಾವಣೆಗಳ ರೂಪದಲ್ಲಿ ವ್ಯಕ್ತವಾಯಿತು. ಮುಂದೆ ಅವರೇ ಹೇಳುತ್ತಿದ್ದಂತೆ, "ನನ್ನ ದೇಹದ ರೋಮಕೂಪದಿಂದ ಆಗಾಗ ರಕ್ತದ ಹನಿಗಳು ಹೊರಬರುತ್ತಿದ್ದವು; ದೇಹದ ಗ್ರಂಥಿಗಳೆಲ್ಲ ಶಿಥಿಲವಾದಂತೆ ಕಾಣುತ್ತಿದ್ದವು. ಹೃದಯದ ತೀವ್ರವೇದನೆಯಿಂದಾಗಿ ಇಂದ್ರಿಯಗಳೆಲ್ಲ ನಿಶ್ಚೇಷ್ಟಿತವಾಗುತ್ತಿದ್ದವು, ದೇಹವು ಮೃತಪಟ್ಟಂತೆ ಬಿದ್ದಿರುತ್ತಿತ್ತು." ಇಂತಹ ತೀವ್ರ ವ್ಯಾಕುಲತೆಯ ಫಲವಾಗಿ ಅವರು ಬಹು ಬೇಗನೆ ರಾಧೆಯ ಮತ್ತು ಕೃಷ್ಣನ ದರ್ಶನವನ್ನು ಪಡೆದರು.

ಶ್ರೀರಾಮಕೃಷ್ಣರು ಮಾಸ್ಟರ್ ಮಹಾಶಯನಿಗೆ ಹೀಗೆ ಹೇಳುತ್ತಾರೆ: "ಹೀಗೆ ಅನುರಾಗವುಂಟಾಯಿತು ಎಂದರೆ ಭಗವಂತನ ದರ್ಶನ ದೊರೆಯುತ್ತದೆ, ತೀವ್ರ ವ್ಯಾಕುಲತೆ ಬೇಕು. ತೀವ್ರ ವ್ಯಾಕುಲತೆಯುಂಟಾದರೆ ಇಡೀ ಮನಸ್ಸು ಭಗವಂತನಲ್ಲಿ ಏಕಾಗ್ರಗೊಂಡುಬಿಡುತ್ತದೆ." ಈ ವಿಚಾರವಾಗಿ ಮಾಸ್ಟರಿಗೆ ಶ್ರೀರಾಮಕೃಷ್ಣರು ಕೆಲವು ಕಥೆಗಳನ್ನು ಹೇಳುತ್ತಾರೆ: ಒಬ್ಬನ ಮಗಳು, ದುರ್ದೈವವಶಾತ್ ಬಾಲವಿಧವೆಯಾಗಿಬಿಟ್ಟಳು. ಆಕೆ ಪತಿಯನ್ನು ನೋಡಿಯೇ ಇರಲಿಲ್ಲ. ತನ್ನ ಜೊತೆಗಾತಿಯರ ಪತಿಯರನ್ನು ಕಂಡು, "ನನ್ನ ಪತಿ ಯಾರು?" ಎಂದು ತಂದೆಯನ್ನು ಕೇಳಿದಳು. ಆಗ ತಂದೆಯು, "ಗೋವಿಂದನೇ ನಿನ್ನ ಒಡೆಯ, ಅವನನ್ನು ಕರೆ, ಬರುತ್ತಾನೆ" ಎಂದನು. ಆಗ ಇವಳು ಕೋಣೆಯ ಬಾಗಿಲು ಹಾಕಿಕೊಂಡು ಗೋವಿಂದನನ್ನು ಕರೆಯುತ್ತಾ ಅಳಲಾರಂಭಿಸುತ್ತಾಳೆ, "ಓ ಗೋವಿಂದ,